ಮುಧೋಳದಲ್ಲಿ ಸ್ಥಾಪಿತಗೊಳ್ಳಲಿರುವ ರೇಷ್ಮೆ ವಂಳಿಗೆ

೯೯೮. ಶ್ರೀ ಬಿ. ಜಿ. ಜವಳಿ (ಮುಧೋಳ).—ಮಾನ್ಯ ರೇಷ್ಮೆ ವಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳದಲ್ಲಿ ಸ್ಥಾಪಿತಗೊಂಡಿರುವ ರೇಷ್ಮೆ ಮಾರಾಟ ಮಳಿಗೆ ಯಾವ ಹಂತದಲ್ಲಿ ಇದೆ.

ಆ) ವಿಳಂಬಕ್ಕೆ ಕಾರಣವೇನು

ಇ) ರೇಷ್ಮೆ ಬೆಳೆ ರೈತರಿಗೆ ಅನುಕೂಲವಾಗುವಂತೆ ಎಷ್ಟು ದಿನಗೊಳಗಾಗಿ ಈ ಕೇಂದ್ರ ಪ್ರಾರಂಭಿಸಲಾಗುವುದು.

ಶ್ರೀ ಕೆ. ಎಂ. ಮುನಿಯಂಪ್ಪ (ರೇಷ್ಮೆ ಸಚಿವರು).

ಅ) ಮುಧೋಳದಲ್ಲಿ ರೇಷ್ಮೆ ಮಾರಾಟ ವಂಳಿಗೆ ಸ್ಥಾಪನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ,

ಇ) ಉದ್ಭವಿಸುವುದಿಲ್ಲ.

ವಿದ್ಯುತ್ ದೀವಗಳ ವಂಂಜೂರಾತಿ ಬಗ್ಗೆ

೯೯೨. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ವಿದ್ಯುತ್ ರಾಜ್ಯ ವಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಗ್ರಾವಗಳನ್ನು ವಿದ್ಯುದ್ದೀಕರಣ ವಾಡಲಾಗಿದೆ.

ಆ) ಉಳಿದ ಎಷ್ಟು ಹರಿಜನ ಕಾಲೋನಿಗಳು, ಲಂಬಾಣಿ ತಾಂಡಗಳು ವತ್ತು ಬೋವಿ ಕಾಲೋನಿಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿದೆ.

ಇ) ಬವುಗಳಿಗೆ ತ್ವರಿತವಾಗಿ ವಿದ್ಯುಚ್ಛಕ್ತಿ ಒದಗಿಸಲಾಗುವುದೇ

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ವಂತ್ರಿಗಳು).—

ಅ) ೧೯೭೧ರ ಜನಗಣತಿಯಂತೆ ಹೊಸದುರ್ಗ ತಾಲ್ಲೂಕಿನಲ್ಲಿ ೧೮೬ ಜನವಾಸವಿರುವ ಗ್ರಾವಗಳಿದ್ದುವು ಇವುಗಳ ವೈಕಿ ೩೧-೧೨-೧೯೮೭ರ ವೇಳೆಗೆ ೧೮೫ ಗ್ರಾವಗಳು ವಿದ್ಯುದ್ದೀಕರಣ ವಾಗಿದ್ದು ಉಳಿದ ಒಂದು ಗ್ರಾವ ಈಗ ಜನರಹಿತವಾಗಿದ್ದು ವಿದ್ಯುದ್ದೀಕರಣವಾಗಬೇಕಾಗಿಲ್ಲ.

೧೯೮೧ ಜನಗಣತಿಯಂತೆ ೭ ಹೆಚ್ಚುವರಿ ಗ್ರಾವಗಳಂ ಬಂದಿದ್ದು ಇವುಗಳ ವೈಕಿ ೨ ಗ್ರಾವಗಳು ವಿದ್ಯುದ್ದೀಕರಣವಾಗಿದೆ.

ಆ) ೩೦-೧-೧೯೮೮ರ ಹೊತ್ತಿಗೆ ೩೭ ಹರಿಜನ ಕಾಲೋನಿಗಳಿಗೂ ೧ ಲಂಬಾಣೀ ತಾಂಡಕ್ಕೂ, ೧೩ ಬೋವಿ ಕಾಲೋನಿಗಳಿಗೂ ವಿದ್ಯುತ್ ಒದಗಿಸಬೇಕಾಗಿದೆ.

ಇ) ಈ ವೇಲ್ಕಂಡ ಹರಿಜನ ಕಾಲೋನಿ, ತಾಂಡಾ ಬೋವಿ ಕಾಲೋನಿಗಳ ವಿದ್ಯುದ್ದೀಕರಣ ವನ್ನು ಗ್ರಾವೀಣ ವಿದ್ಯುದ್ದೀಕರಣ ನಿಗವದ ಸಹಾಯದಿಂದ ವಾಡಲು ಒಂದು ಯೋಜನೆ ತಯಾರಿಸಲು ವಿವರ ಸಂಗ್ರಹಿಸಲಾಗುತ್ತಿದೆ. ಆದಷ್ಟು ಜಾಗ್ರತೆ ಯೋಜನೆ ತಯಾರಿಸಿ ವಂಜೂರಾತಿ ಪಡೆಯಲು ಯತ್ನಿಸಲಾಗುತ್ತದೆ.